ಸಾಕ್ಷಿಯನ್ನು ದಿಃ 09.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ

ನಾನು ವಿದ್ಯಾಭ್ಯಾಸ ಕಲಿತಿಲ್ಲ. ನನ್ನ ಪ್ರಮಾಣಪತ್ರವನ್ನು ಓದಿಸಿ ಅರ್ಥ ಮಾಡಿ ಕೊಂಡಿದ್ದೇನೆ. ಮೂರು ವರ್ಷದ ಹಿಂದೆ ಅಪಘಾತ ಆಗಿರುತ್ತದೆ. ನಾವು ಜುಪಿಟರ್ ವಾಹನದಲ್ಲಿ ಹೋಗುತ್ತಿದ್ದೆವು, ಅದರ ಸಂಖ್ಯೆ ಗೊತ್ತಿಲ್ಲ. ಸ್ಕೂಟರ್ ನಲ್ಲಿ ನಾನು ಹಾಗೂ ನನ್ನ ತಮ್ಮ ನವೀನ್ ಇಬ್ಬರೇ ಹೋಗುತ್ತಿದ್ದೆವು. ಆ ಸಮಯದಲ್ಲಿ ವಾಹನದಲ್ಲಿ ನಾವು ಮೂರು ಜನ ಹೋಗುತ್ತಿದ್ದೆವು ಎಂದರೆ ಸುಳ್ಳು. ನನ್ನ ಅರ್ಜಿಯಲ್ಲಿ ನಟರಾಜು ಸ್ಕೂಟರ್ ಚಲಾಯಿಸುತ್ತಿದ್ದುದಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ, ನವೀನ್ ಚಲಾಯಿಸ್ತುದ್ದನು. ನಾವು ಗಾಡಿಯಲ್ಲಿ ಮೂರು ಜನ ಹೋಗುತ್ತಿದ್ದ ಕಾರಣ ನಟರಾಜ್ ಸವಾರನಾಗಿದ್ದನು ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ.

2) ಕೆ ಆರ್ ಪೇಟೆ ಬಸ್ ನಿಲ್ದಾಣದಿಂದ ಹೊಸಹೊಳಲುವಿನ ಬಸವೇಶ್ವರ ದೇವಸ್ಥಾನದ ಬಳಿ ಅಪಘಾತ ಆಗಿರುತ್ತದೆ. ನಾನು ಕೆ ಆರ್ ಪೇಟೆಯಿಂದ ಲಕ್ಷ್ಮೀ ಪುರಕ್ಕೆ ಹೋಗುತ್ತಿದ್ದೆನು. ಅಪಘಾತ ಸ್ಥಳದ ಬಳಿ ಒಂದು ಕೆರೆ ಇದೆ ಎಂದರೆ ಸರಿ. ಕೆರೆಗೆ ಇಳಿಯಲು ರಸ್ತೆಯಿಂದಲೇ ಮೆಟ್ಟಿಲುಗಳು ಇವೆ ಎಂದರೆ ಸರಿಯಲ್ಲ. ಅಪಘಾತ ಸಂಜೆ 5 ರಿಂದ 5.30 ರಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಸಾಕಷ್ಟು ಮಳೆ ಬರುತ್ತಿತ್ತು ಎಂದರೆ ಸರಿ. ಸದರಿ ಹೊಳೆಯ ಬಳಿ ಎದುರುದಾರರ ಬೈಕ್ ನಿಂತಿತ್ತು, ನಮ್ಮ ಸ್ಕೂಟರ್ ಸವಾರ ಅತಿವೇಗವಾಗಿ ಹೋಗಿ ಸದರಿ ಬೈಕ್ ಗೆ ಅಪಘಾತಪಡಿಸಿರುತ್ತಾನೆ ಎಂದರೆ ಸುಳ್ಳು. ಸದರಿ ಬೈಕ್ 1 ನೇ ಎದುರುದಾರನಿಗೆ ಸೇರಿತ್ತು ಎಂದರೆ ಸರಿ. 1 ನೇ ಎದುರುದಾರ ಹೊಸಹೊಳಲು ಕಡೆಯಿಂದ ಬರುತ್ತಿದ್ದನು. ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ಎದುರುದಾರ ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದು, ನಾವೇ ರಸ್ತೆಯ ತಪ್ಪು ಬದಿಗೆ ಹೋಗಿ ಅಪಘಾತಪಡಿಸಿದ್ದೇವೆ ಎಂದರೆ ಸರಿಯಲ್ಲ.

3) ಅಪಘಾತದಲ್ಲಿ ನನ್ನ ತಲೆಗೆ ಪೆಟ್ಟಾಗಿರುತ್ತದೆ. ನನ್ನ ತಮ್ಮನಿಗೂ ಸಹ ಪೆಟ್ಟಾಗಿತ್ತು. ಮೊದಲು ನಾವು ಕೆ ಆರ್ ಪೇಟೆ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಸರ್ಕಾರಿ ಆಸ್ಪತ್ರೆಗೆ 1 ನೇ ಎದುರುದಾರ ಬಂದು ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.